

ಇಡೀ ಬಾಳನ್ನು ಹೊನಲ ದೀಪದಂತೆ ಪೊರೆಯೋ ಸಹಚಾರಿಣಿಯಾದ ಪಲ್ಲವಿ ಸಂದೇಶನ ಆತ್ಮದೇಗುಲದಲ್ಲಿ ಆರಾಧ್ಯದೇವಿಯಾಗಿದ್ದಳು. ಅವಳಿಗೂ ಇವನು ಬಿರುಬಿಸಿಲಲ್ಲೂ ಮಳೆಹೊಯ್ಯುವ ಚೆಲುವನಾಗಿದ್ದ. ಆದರೂ ಅವಳಿದ್ದದ್ದು ಮಹಾನಗರದಲ್ಲಿ, ಅಲ್ಲಿನ ಜೀವನಶೈಲಿ, ಯಾರದ್ದೋ ತುಂಟನಗೆ, ಇವ್ಯಾವುದೋ ಹುಂಬಾಟಿಕೆ, ಯಾರೂ ನನ್ನ ನೋಡುತ್ತಿಲ್ಲ ಅನ್ನುವ ಭದ್ರತೆಗಳ ನಡುವೆ ಅವಳು ಪಲ್ಲವಿಯೇ ಆಗಿರದೇ ಬೇರೆಯೇ ಆಗಿಹೋಗಿದ್ದಾಳಾ ಅನ್ನುವ ಭಯವೊಂದು ಸಂದೇಶನನ್ನು ಆಗಾಗ ಬೆನ್ನಟ್ಟುತ್ತಿತ್ತು. ಆದರೂ ಅವನು ಅವಳ ಹೆಸರಲ್ಲಿ ನೆಮ್ಮದಿ ಹುಡುಕುತ್ತಿದ್ದ. ಅವಳು ಊರಿನಿಂದ ಬಂದು ಕೆಲ ಕಾಲ ಊರಲ್ಲೇ ಇದ್ದು ಮರಳಿ ಮಹಾನಗರದ ಬಸ್ಸು ಹಿಡಿಯೋ ಮೊದಲು ಇದೇ ಬಸದಿಯಲ್ಲಿ ಕೊಂಚ ಕೂತು, ಏನನ್ನೋ ಕಂಡುಕೊಂಡು ಭಾರದ ಹೆಜ್ಜೆಯಲ್ಲೋ, ಮತ್ತೆ ಇಲ್ಲಿ ಬರೋದೇ ಇಲ್ಲ ಅಂತ ತಾನೇ ಸಾರುತ್ತಲೋ ಮಹಾನಗರದ ಬಸ್ಸು ಹಿಡಿದು ಹೋಗುತ್ತಿದ್ದಳು. ಇದೇ ವೇಳೆಯಲ್ಲಿ ಆಕೆ ಸಂದೇಶನಿಗೆ ಸಿಕ್ಕಿ ಎಷ್ಟು ಸಲ ಮಾತಾಡಿಲ್ಲ? ಇದೇ ಬಸದಿಯಲ್ಲಿ ಸಿಕ್ಕಿ ಎಷ್ಟೋ ಸಂಜೆಗಳನ್ನು ಅವನಿಗಾಗಿಯೇ ಕೊಟ್ಟಿದ್ದಳು. ಆದರೆ ಈಗೀಗ ಸಂದೇಶ ಮತ್ತು ಪಲ್ಲವಿಗೆ ತಮ್ಮ ಸಂಬಂಧ ಬರೀ ಹೀಗೇ ಇದ್ದು ಬಿಡಬೇಕಾ? ಅಸ್ಪಷ್ಟವಾಗಿ ಕಡಲಿನ ಅಲೆಯೋ? ನದಿ ಅಲೆಯೊ? ಗೊತ್ತಾಗದ ಹಾಗೇ ನಾಮಶೂನ್ಯವಾಗಿರಬೇಕಾ ಅನ್ನಿಸಲು ಶುರುವಾಗಿತ್ತು. ಇದು ಜಾಸ್ತಿಯಾಗಿ ಅನ್ನಿಸಿದ್ದು ಸಂದೇಶನಿಗೆ.

ಅವನಿಗೆ ಈಗ 28 ತುಂಬಿತ್ತು. ತನ್ನ ಬಾಳಿಗೆ ಪಲ್ಲವಿಯೇ ಸಹಚಾರಿಣಿಯಾಗಬೇಕು ಅಂತ ಅವನಿಗೆ ಗಾಢವಾಗಿ ಅನ್ನಿಸಿದೆ. ಆದರೆ ಅದೇ ಗಾಢತನ ಪಲ್ಲವಿಯಲ್ಲಿಲ್ಲ. ಅವನು ಹಾಗೆಲ್ಲಾ ಹೇಳೋವಾಗ ಆಕೆ ಕಂಪಿಸುತ್ತಾಳೆ. ಅವಳು ಅವನನ್ನು ಇಷ್ಟಪಟ್ಟಿದ್ದರೂ, ಅವಳಲ್ಲಿ ಯಾರಿಗೂ ಗೊತ್ತಾಗದ ವಿಲಕ್ಷಣ ಭಾವವೊಂದು ಉತ್ಪತ್ತಿಯಾಗಿ ನಿಸ್ತೇಜಿತಳಾಗುತ್ತಾಳೆ. ಹಾಗಂತ ನೀನು ನಂಗೆ ಬೇಡ. ನನ್ನ ಬಿಟ್ಟುಬಿಡು ಅಂತ ಒಂದಿನಾನೂ ಹೇಳಿಲ್ಲ ಆಕೆ. ಆನೆಕೆರೆಯ ಬಸದಿಗಪ್ಪಲ್ಲಿ ಆಕೆ ಸ್ಪಷ್ಟತೆಯಿಲ್ಲದ ಪ್ರಶ್ನೆಯಾಗುತ್ತಿದ್ದಳು. ದೂರದಲ್ಲಿ ನಗುತ್ತಾ ನಿಂತಿರುವ ಬಾಹುಬಲಿ ಬೆಟ್ಟದ ಶಾಂತತ್ವದಲ್ಲಿ ಲೀನಳಾಗುತ್ತಿದ್ದಳು. ಅಷ್ಟೊತ್ತಿಗೆ ಇವಳನ್ನು ನೋಡುತ್ತಾ ನಿಲ್ಲುವ ಸಂದೇಶ ಕೂಡ ಏನಾಗುತ್ತೋ ಆಗಲಿ... ಈ ಕ್ಷಣದಲ್ಲಿ ಬದುಕೋದು ಮುಂದೇನಾಗುತ್ತೋ ಆಗಲಿ ಅಂತ ನಿಡುಸುಯ್ಯುತ್ತಿದ್ದ.

ಪಲ್ಲವಿ, ಬಸದಿಗೆ ಆಗಲೇ ಬಂದು ಹೋಗಿದ್ದಾಳಾ? ಮತ್ತೆ ತನ್ನಷ್ಟಕ್ಕೇ ಕೇಳಿದಾಗ ಸಂದೇಶನ ಮೂಗೊಳಗೆ ಪಲ್ಲವಿಯಷ್ಟೇ ಹಾಕುತ್ತಿದ್ದ ಸೆಂಟಿನದ್ದೋ, ಪೌಡರಿನದ್ದೋ ಪರಿಮಳ ಸುತ್ತಿಕೊಂಡಿತು. ಆ ಎಲ್ಲಾ ಕೃತಕ ವಾಸನೆಗಳಿಗಿಂತ ಅವನೊಳಗೇ ಅವನಿಗಷ್ಟೇ ಅರ್ಥವಾಗುತ್ತಿದ್ದ ಅವಳ ಒಲವಿನ ಪರಿಮಳವೂ ಸೇರಿ, ಆ ಸಂಜೆ ಒಂದು ಅಲೌಕಿಕ ಆನಂದ ಲಭಿಸಿತು ಅವನಿಗೆ. ಇದು ಅವಳದ್ದೇನಾ ಪರಿಮಳ, ಇವತ್ತೇ ಬಂದಿರಬಹುದಾ? ಇಷ್ಟು ಬೇಗ ಹೋಗಿಯೂ ಆಯಿತಾ? ನಂಗ್ಯಾಕೆ ಹೇಳೇ ಇಲ್ಲ ಆಕೆ? ಅಂತ ಸಂದೇಶ ಯೋಚಿಸುತ್ತಲೇ ಹೋದಂತೆಲ್ಲಾ ಪಲ್ಲವಿ ಬಂದು ಹೋಗಿದ್ದ ಚಿತ್ರವೇ ಅವನ ಚಿತ್ತಭಿತ್ತಿಯಲ್ಲಿ ಗಟ್ಟಿಯಾಯಿತು. ಪಲ್ಲವಿ ಇಲ್ಲಿ ಬಂದೇ ಇಲ್ಲ ಎನ್ನುವ ನಿರ್ಧಾರ ಅವನಲ್ಲಿ ಬರಲು ಆಸ್ಪದವೇ ಇರಲಿಲ್ಲ, ಮೊದ ಮೊದಲು ಇದು ಪಲ್ಲವಿಯ ಪರಿಮಳ ಇರಲಿಕ್ಕಿಲ್ಲ ಇರಲಿಕ್ಕಿಲ್ಲ ಎನ್ನುವ ಉತ್ತರವೇ ಕೊನೆಗೆ ಇದು ಪಲ್ಲವಿಯದ್ದೇ ಎನ್ನುವಲ್ಲಿಗೆ ಬಂದು ನಿಂತಿತು.

ಹೌದು ಪಲ್ಲವಿಯದ್ದೇ ಇದು, ಬೇರೆ ಯಾರ ಪರಿಮಳವಾಗಿರಲು ಸಾಧ್ಯವೇ ಇಲ್ಲ. ಆಕೆ ಇವತ್ತೇ ಬಂದು ಹೋಗಿದ್ದಾಳೆ. ಸಂದೇಶ ಗಾಬರಿಯಾದ.

ಖಾತರಿಪಡಿಸಿಕೊಳ್ಳಲು ಮತ್ತೆ ಬಸದಿಯ ಸುತ್ತ ಸುತ್ತಾಡಿದ. ಅಲ್ಲೇ ಬಸದಿಯ ಕೊನೆಯ ಮೆಟ್ಟಿಲೊಂದರ ಬುಡದ ಮರೆಯಲ್ಲಿ ಕಾಗದ ದಂತಿರೋ ಹಸಿರ ವಸ್ತುವೊಂದು ಕಾಣಿಸಿತು. ಸಂದೇಶನ ಕಣ್ಣಬೆಳಕು ಮಿಂಚಾಡಿತು ಹಾಗೇ ಸೋಜಿಗದಿಂದ ಎತ್ತಿಕೊಂಡ. ಸಾವಿರ ಪರಿಮಳಗಳು ಒಟ್ಟಾಗಿ ಹೊಸ ಪರಿಮಳವೊಂದು ಹುಟ್ಟಿ ಅವನನ್ನು ರೋಮಾಂಚನಗೊಳಿಸಿದವು.

ಐಟೆಕ್ಸ್ ಪಲ್ಲವಿ... ಹೊಂಬಣ್ಣದ ಹುಡುಗಿಯ ಚಿತ್ರವಿದ್ದ ಬಿಂದಿ ಕಂಪೆನಿಯ ಪೊಟ್ಟಣ, ಪರಿಮಳದ ಜೊಲ್ಲು ಸುರಿಸುತ್ತಾ ನಿಂತಿತ್ತು.

ಪಲ್ಲವಿ ಬಂದಿದ್ದಾಳೆ..! ಇದು ಅವಳದ್ದೇ ಬಿಂದಿ ಪ್ಯಾಕೆಟ್ ಅಲ್ವಾ? ಅಂತ ಪ್ರಶ್ನೆ ಆಗುತ್ತಾ ಕೊನೆಗೆ ಅದೇ ಉತ್ತರ ಆಗಿಹೋಯಿತು. ಸಂದೇಶ ಬಿಂದಿ ಪ್ಯಾಕೆಟ್ ಮೂಸಿ ನೋಡಿದ. ಹೌದು ಅದೇ ಪರಿಮಳ, ಸಂದೇಶ ತುಂಬಿಕೊಂಡ.

'ಪಲ್ಲವಿ, ನಿಂದೇ ಹೆಸರಿನ ಒಂದು ಬಿಂದಿ ಕಂಪನಿಯಿದೆ ಮಾರಾಯ್ತಿ, ನಿಂಗೆ ಗೊತ್ತೇ ಇಲ್ವಾ?' ಅಂತ ಅವನೇ ಮೊದಲು ಆಕೆಗೆ ಐಟೆಕ್ಸ್ ಪಲ್ಲವಿ ಕಂಪನಿಯ ಬಿಂದಿಯನ್ನು ಪರಿಚಯಿಸಿದ್ದು. ಆಕೆ ತುಂಬಿಕೊಂಡಿದ್ದಳು. ಆ ಬಳಿಕ ಆಕೆ ಅದೇ ಕಂಪನಿಯ ಬಿಂದಿಯನ್ನೇ ಇಡುತ್ತಿದ್ದಳು. ಸಂದೇಶ ಆಸೆಗಣ್ಣಿನಿಂದ ಒಮ್ಮೆ ಆಕೆಯ ಬಿಂದಿಯನ್ನೂ, ಮತ್ತೊಮ್ಮೆ ಬಿಂದಿ ಹಾಕಿಕೊಂಡ ಕೂಡಲೇ ಹೊಳೆಯುತ್ತಿದ್ದ ಅವಳ ಮೈಯ ಪರಿಮಳವನ್ನೂ ಅನುಭವಿಸುತ್ತಿದ್ದ. ಅಲ್ಲದೇ ಆಕೆ ಬಿಂದಿ ಪ್ಯಾಕೆಟನ್ನು ತನ್ನ ಪರ್ಸಿನೊಳಗೆ ಇಟ್ಟಾಗ ಅದು ಸಹಜವಾಗಿ ಅವಳ ಪರ್ಸಿನಲ್ಲಿರೋ ಲಿಂಬೆ ಹಣ್ಣಿನ ಸಣ್ಣ ಸುಗಂಧ ದ್ರವ್ಯವೊಂದರ ಸಕಲ ಪರಿಮಳಗಳನ್ನೂ ತನ್ನದಾಗಿಸಿಕೊಂಡು ಮತ್ತೂ ದಿವ್ಯ ಘಮಲಿನಿಂದ ತುಂಬಿಕೊಳ್ಳುತ್ತಿದ್ದುದನ್ನು ಸಂದೇಶ ಗಮನಿಸಿದ್ದ.

ಈಗ ಅದೇ ಲಿಂಬೆ ಹಣ್ಣಿನ ಪರಿಮಳ ಬಿಂದಿ ಪ್ಯಾಕೆಟನ್ನು ಆವರಿಸಿಕೊಂಡಿತ್ತು. ಇದೂ ಪಲ್ಲವಿಯದ್ದೇ ಬಿಂದಿ ಪ್ಯಾಕೆಟ್, ಅನ್ನೋ ತೀರ್ಮಾನಕ್ಕೆ ಬಂದ ಸಂದೇಶನಿಗೆ ಕೈಗೆ ಪಲ್ಲವಿಯೇ ಸಿಕ್ಕಷ್ಟು ಖುಷಿಯಾಯ್ತು. ಪಲ್ಲವಿ ಇಷ್ಟು ಬೇಗ ಬಸ್ಸು ಹಿಡಿಯಲು ಸಾಧ್ಯವೇ ಇಲ್ಲ ಅಂತನ್ನಿಸಿದ್ದರಿಂದ ಸೀದಾ ಬೈಕ್ ಹತ್ತಿ ಚಂಡೆಕ್ರಾಸ್ ಬಸ್‌ನಿಲ್ದಾಣದ ಕಡೆಗೆ ಹೋದ. ಐದ್ಹತ್ತು ಬಸ್ಸುಗಳು ಮಹಾನಗರದ ದಾರಿಯತ್ತ ಹೋಗಲು ಅಣಿಯಾಗಿದ್ದವು. ಒಂದೊಂದು ಬಸ್ಸನ್ನು ಹೊಕ್ಕ ಸಂದೇಶನಿಗೆ ಒಂದೊಂದು ಬಸ್ಸಿನಲ್ಲಿಯೂ ನೂರಾರು ಪರಿಮಳಗಳು ಮುತ್ತಿಕೊಂಡವು. ಪಲ್ಲವಿಯಂತೆಯೇ ಚೂಡಿ–ವೇಲು ಅಲ್ಲಾಡಿಸುತ್ತಿದ್ದ ಹುಡುಗಿಯರು ಕಿಟಕಿ ಬದಿಯಲ್ಲಿ ಕೂತು ಕಾಣದ ಆಕಾಶ ನೋಡುತ್ತಿದ್ದರು. ಹಗಲುಗನಸಿನಲ್ಲಿ ಲೊಚಗುಟ್ಟುತ್ತಿದ್ದರು. 'ಬರುತ್ತೇನೆ ಕಣೋ, ಹುಷಾರಾಗಿರು' ಅಂತ ತನ್ನವನ ಕೈಗಳನ್ನು ಕುಲುಕುತ್ತಾ ಅಭಯ ನೀಡುತ್ತಿದ್ದರು. ಎಲ್ಲಿಯೂ ಸಂದೇಶನ ಪಲ್ಲವಿ ಕಾಣಿಸಲಿಲ್ಲ. ಯಾವ ಬಸ್ಸುಗಳ ಕಿಟಕಿ ಪಕ್ಕದಲ್ಲಿಯೂ ಅವಳ ಬೆಳಕಿರಲಿಲ್ಲ. ದೂರದಿಂದ ಆನೆಕೆರೆ ಬಸದಿಯ ಕೆಂಪುತಾವರೆಗಳು ತನ್ನನ್ನೇ ನೋಡುತ್ತಾ 'ಏನೋ ಅವಸ್ಥೆ ನಿಂದು, ಅವಳ ಪರಿಮಳಕ್ಕಾಗಿ ಯಾಕೆ ಅಷ್ಟೊಂದು ಜೀವ ಬಿಡ್ತೀಯಾ? ಅವಳೇ ಒಂದು ಪರಿಮಳ, ಪರಿಮಳ ಕೈಗೆ ಸಿಗಲ್ಲ. ನೋಡಬೇಕನ್ನಿಸಿದರೂ ಅದಕ್ಕೆ ಆಕಾರವೇ ಇಲ್ಲ. ಬಿಟ್ಟು ಬಿಡು. ಬಾ ನನ್ನ ತೆಕ್ಕೆಯಲ್ಲಿ ಹಾಯಾಗಿರು' ಅಂತ ಕರೆದಂತಾಯಿತು. ಐಟೆಕ್ಸ್ ಪಲ್ಲವಿಯ ತಿಳಿಹಸಿರು ಕಾಗದ ಮತ್ತೂ ತನ್ನ ಒಂದು ತೂಕ ಬಣ್ಣವನ್ನು ಕಳೆದುಕೊಂಡಂತೆ ಸಂದೇಶನ ಕಿಸೆಯಲ್ಲಿ ತೆಪ್ಪಗೇ ಕೂತಿತ್ತು. ಮತ್ತೆ ಆನೆಕೆರೆಯ ಸಂದಿನಲ್ಲಿ ಬಂದು ಕುಳಿತವನಿಗೆ ಪಲ್ಲವಿ ಹಿಂದೆ ಹೇಳಿದ್ದು, ತನ್ನೊಳಗೆ ಕನಸಿದ್ದು ಎಲ್ಲವೂ ನೆನಪಾಯ್ತು.

'ನಾವು ನಮ್ಮೊಳಗೇ ಅಚಲವಾಗಿ ಬದುಕಬೇಕು, ನಾಳೆ ನಾನು ನಿನ್ನ ಬಿಟ್ಹೋಗ್ಬೋದು, ಆದರೆ ನಿನ್ನೊಳಗು ನಿನ್ನನ್ನು ಬಿಡ್ಬಾರ್ದು, ನಂಗೂ ಹಾಗೇ, ನೀನು ಬಿಟ್ಹೋದ್ರೂ ನನ್ನೊಳಗಿರುವ ನಿನ್ನೊಳಗಿನ ಬೆಳಕು ಗಟ್ಟಿಯಾಗುತ್ತಾ ಹೋಗಬೇಕು ಅಷ್ಟೇ' ಅಂತ ಯಾವುದೋ ದೃಢವಾದ ನಿರ್ಧಾರದಲ್ಲಿ ಹೇಳಿದ್ದಳು. ಅಂತದ್ದೇ ಅವಳ ವಿಲಕ್ಷಣ ಮಾತುಗಳು ಈಗ ವೀರಪಾಂಡ್ಯ ರಾಜ ಕಟ್ಟಿಸಿದ್ದ ಈ ಪುರಾತನ ಬಸದಿಯ ಸುತ್ತ ಸುತ್ತಿ ಸಂದೇಶನಲ್ಲಿ ಕೂಡುತ್ತಾ... ಕಳೆಯುತ್ತಾ... ಭಾಗಿಸಲ್ಪಡುತ್ತಾ... ಗುಣಕಾರವಾಗುತ್ತಾ ಅಸ್ಪಷ್ಟ ಒಲವಿನ ಲೆಕ್ಕವಾಯ್ತು.

***

ಅಂಗಡಿಯಿಂದ ಹೊಸ ಬಿಂದಿಯ ಪ್ಯಾಕೆಟ್ ಒಂದನ್ನು ಖರೀದಿಸಿ, ಆ ಬಿಂದಿ ಪ್ಯಾಕೆಟಿನ ಕಾಗದದ ಕಿರು ಬಣ್ಣವನ್ನು ನೋಡಿದಾಗ ಸಂದೇಶನ ನೆನಪಾಗಿ ಪಲ್ಲವಿಯ ಕಣ್ಣಲ್ಲಿ ಕಣ್ಣೀರು ಧುತ್ತನೇ ಹಣತೆ ಹಚ್ಚಿತು. ನಡುಗುವ ಕೈಗಳಿಂದ ಕುಂಕುಮ